# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

## ಸಿಸಿ ಸಂಖ್ಯೆ: 588/2023

| | |
|---|---|
| ಹೆಸರು | : ಸಂದೀಪ್ |
| ತಂದೆಯ ಹೆಸರು | : ಸೀತಾರಾಮ ಭಂಡಾರಿ |
| ಪ್ರಾಯ | : 28 ವರ್ಷ |
| ಉದ್ಯೋಗ | : ಮುಡಿ ತೆಗೆಯುವುದು |
| ವಾಸ | : ಉಜಿರೆ, ಬೆಳ್ತಂಗಡಿ ತಾಲೂಕು |

**ದಿನಾಂಕ 05.08.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ಚಾಸಾ1 ರವರು ನನಗೆ ತಂಗಿಯಾಗಬೇಕು. ಅವರನ್ನು 1ನೇ ಆರೋಪಿಗೆ ಮಂಗಳೂರು ಸೇಕ್ರೇಡ್ ಹಾರ್ಟ್ ಚರ್ಚ್ ನಲ್ಲಿ ದಿಃ 20.1.2022 ರಂದು ಮದುವೆ ಮಾಡಿಕೊಟ್ಟಿರುತ್ತೇವೆ. ಮದುವೆಯಾದ ನಂತರ ದಿಃ 23.1.2022 ರಂದು ಚಾಸಾ1 ರವರು ತನ್ನ ಗಂಡನ ಮನೆ ಮುಂಬೈಗೆ ಹೋಗಿರುತ್ತಾರೆ. ಆಗ ಅವರ ಮನೆಯಲ್ಲಿ 1 ಮತ್ತು 2 ನೇ ಆರೋಪಿಯೊಂದಿಗೆ 2ನೇ ಆರೋಪಿಯ ಗಂಡ ವಾಸವಿರುತ್ತಾರೆ. ನಂತರ ಚಾಸಾ1 ರವರಿಗೆ ಆರೋಪಿತರು ಕಿರುಕುಳ ಕೊಡಲು ಪ್ರಾರಂಭಿಸಿರುತ್ತಾರೆ. ಹಣ ತರಬೇಕು ಹಾಗೂ ಚಿನ್ನ ಹಾಕಿರುವುದು ಕಡಿಮೆಯಾಗಿದೆ ಎಂದು ಕಿರುಕುಳ ಕೊಡುತ್ತಿದ್ದರು. ಚಾಸಾ1 ರವರು ಧರಿಸಿದ್ದ ತಾಳಿ ಸರವನ್ನು ನೋಡಿ ಎಷ್ಟು ಚಿನ್ನ ಇದೆ ಎಂದು ಕೇಳಿ ಅಷ್ಟು ಚಿನ್ನ ಇರುವುದಿಲ್ಲ ಎಂದು ತಾಳಿಯನ್ನು ಕಿತ್ತು ಬಿಸಾಡಿರುತ್ತಾರೆ. 1ನೇ ಆರೋಪಿಗೆ ಬೇರೆಯವರೊಂದಿಗೆ ಅನೈತಿಕ ಸಂಬಂಧ ಇದ್ದು, ಈ ವಿಚಾರ ಚಾಸಾ1 ರವರಿಗೆ ತಿಳಿದುಬಂದಿರುತ್ತದೆ. 1ನೇ ಆರೋಪಿ ಬೇರೆಯವರೊಂದಿಗೆ ಮೆಸೇಜ್ ಮಾಡುವ ಎಲ್ಲಾ ವಿಚಾರಗಳು ಚಾಸಾ1 ರವರ ಮೊಬೈಲ್ ಗೆ ಮೆಸೇಜ್ ಗಳು ಬರುತ್ತಿದ್ದು ಅದರಿಂದ ತಿಳಿದುಬಂದಿರುತ್ತದೆ. ನಂತರ ಈ ವಿಚಾರವನ್ನು

ಚಾಸಾ1 ರವರು 1ನೇ ಆರೋಪಿಗೆ ಕೇಳಲಾಗಿ 1ನೇ ಆರೋಪಿ ಚಾಸಾ1 ರವರಿಗೆ ದಿಃ 29.3.2022 ರಂದು ಹಲ್ಲೆ ಮಾಡಿರುತ್ತಾರೆ. ನಂತರ ಈ ವಿಚಾರವನ್ನು ಚಾಸಾ1 ರವರು ನನಗೆ ಹೇಳಿದಾಗ ನಾನು ನಮ್ಮ ಮನೆಯಲ್ಲಿ ಸ್ವಲ್ಪ ದಿನ ಇರು ನಂತರ ಹೋಗಬಹುದು ಎಂದು ಹೇಳಿದ್ದೆ. ಮೊದಲ ಬಾರಿ ವಿಚಾರವನ್ನು ಹೇಳಿದಾಗ ಸರಿದೂಗಿಸಿಕೊಂಡು ಹೋಗುವಂತೆ ಚಾಸಾ1 ರವರಿಗೆ ಹೇಳಿದ್ದೆ. 5ನೇ ತಾರೀಖಿನಂದು ಚಾಸಾ1 ರವರು ಬರುತ್ತೇನೆ ಎಂದು ಹೇಳಿದ್ದರು ಸಡನ್ನಾಗಿ ದಿಃ 2.4.2022 ರಂದು ರಾತ್ರಿ ದೂರವಾಣಿ ಕರೆ ಮಾಡಿ ದಿಃ 3.4.2022 ರಂದು ಮನೆಗೆ ಬಂದು ಹಲ್ಲೆ ಮಾಡಿದ ವಿಚಾರ, ಹಣವನ್ನು ಕೇಳಿದ ವಿಚಾರವನ್ನು ಹೇಳಿರುತ್ತಾರೆ. ಅಲ್ಲದೆ 1ನೇ ಆರೋಪಿಯ ಅನೈತಿಕ ಸಂಬಂಧದ ವಿಚಾರವನ್ನು ಸಹ ತಿಳಿಸಿರುತ್ತಾರೆ. ಚಾಸಾ1 ರವರಿಗೆ ಅವಾಚ್ಯವಾಗಿ ನಿಂದಿಸಿರುವ ಬಗ್ಗೆ ಸಹ ತಿಳಿಸಿರುತ್ತಾರೆ. ನಂತರ ನನ್ನ ತಾಯಿ 2ನೇ ಆರೋಪಿಗೆ ದೂರವಾಣಿ ಕರೆ ಮಾಡಿ ಕೇಳಿದಾಗ ನಿಮ್ಮ ಮಗಳನ್ನು ಕಳುಹಿಸುವುದು ಬೇಡ ಮತ್ತು ನೀವು ಬರುವುದು ಬೇಡ, ಅಲ್ಲೆ ಇರಿ ಎಂದು ಹೇಳಿದ್ದರು. ನಂತರ ನನ್ನ ತಾಯಿ ಸಮಾಜಕ್ಕೆ ಹೋಗಿ ನಮ್ಮ ಸಮಾಜದ ಅಧ್ಯಕ್ಷರಾದ ಸುರೇಶ್ ಭಂಡಾರಿ ರವರಿಗೆ ವಿಚಾರ ಹೇಳಿದಾಗ ಅವರು ಸರಿ ಮಾಡುತ್ತೇನೆ ಎಂದು ಹೇಳಿದ್ದರು. ಆರೋಪಿತರ ಮನೆಗೆ ನನ್ನ ಮಾವ, ತಾಯಿ ಎಲ್ಲರೂ ಸಹ ಹೋಗಿದ್ದರು. ಆಗ ಚಾಸಾ1 ರವರ ಬ್ಯಾಗನ್ನು ಬಿಸಾಡಿ ಹಣ ತರುವುದಾದರೆ ಬರಲಿ ಇಲ್ಲವಾದರೆ ಬೇಡ ಎಂದು ಹೇಳಿರುತ್ತಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ದಿಃ 10.7.2022 ರಂದು ಹೇಳಿಕೆ ಪಡೆದಿದ್ದಾರೆ. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಈ ದಿನ ಆರೋಪಿತರು ಖುದ್ದು ವಿನಾಯಿತಿಗೆ ಅರ್ಜಿ ಸಲ್ಲಿಸಿರುವುದರಿಂದ ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ಚಾಸಾ1 ರವರು ದಿಃ 3.4.2022 ರಂದು ನಮ್ಮ ಮನೆಗೆ ಬಂದು ವಿನಃ ಕಾರಣ ದಿನಬೆಳಿಗ್ಗೆ ತಪ್ಪುಗಳನ್ನು ಹುಡುಕಿ ಗಲಾಟೆ ಮಾಡಿ ಮನೆಯಿಂದ ಹಣ ತರಲಿಲ್ಲ, ಕೇಳಿದಷ್ಟು ಹಣ ತರದೇ ಇದ್ದರೆ ಮನೆಯಿಂದ ಹೊರಗೆ ಹೋಗಬೇಕು ಎಂದು ಒತ್ತಾಯ ಮಾಡುತ್ತಿದ್ದರು ಎಂಬ ವಿಚಾರವನ್ನು ನನಗೆ

ಹೇಳಿರುತ್ತಾರೆ ಎಂದರೆ ಸರಿ. ಅದೇ ರೀತಿ ಚಾಸಾ1 ರವರನ್ನು ಮನೆಯಿಂದ ಎಲ್ಲಿಯೂ ಸಹ ಹೊರಗಡೆ ಹೋಗಲು ಬಿಡುತ್ತಿರಲಿಲ್ಲ ಎಂದರೆ ಸರಿ. ಮದುವೆಯಾದ ನಂತರ 1 ವಾರದ ತನಕ 1ನೇ ಆರೋಪಿ ಮತ್ತು ಚಾಸಾ1 ರವರು ಚೆನ್ನಾಗಿ ಇದ್ದು ನಂತರ ರಾತ್ರಿ ಹೊತ್ತಿನಲ್ಲಿ 1ನೇ ಆರೋಪಿ ಮನೆಗೆ ಸರಿಯಾಗಿ ಬರುತ್ತಿರಲಿಲ್ಲ ಎಂದು ಹೇಳಿದ್ದರು ಎಂದರೆ ಸರಿ. ಅಕ್ರಮ ಸಂಬಂಧದ ಬಗ್ಗೆ 1ನೇ ಆರೋಪಿಯನ್ನು ಕೇಳಿದಾಗ 1ನೇ ಆರೋಪಿ ನಾನು ಏನು ಬೇಕಾದರೂ ಮಾಡುತ್ತೇನೆ ನೀನು ಮನೆಯಿಂದ ಹೋಗು ಎಂದು ಹೇಳಿದ್ದರು ಎಂದು ಹೇಳಿರುತ್ತಾರೆ ಎಂದರೆ ಸರಿ. ಅದೇ ರೀತಿ ಚಾಸಾ1 ರವರಿಗೆ ಆರೋಪಿತರು ಚಾಸಾ1 ರವರಿಗೆ ಇನ್ನು ಮುಂದೆ ಈ ವಿಚಾರದ ಬಗ್ಗೆ ಮಾತನಾಡಿದರೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.  1ನೇ ಆರೋಪಿ ಫ್ಲೈಟ್ ಟಿಕೇಟನ್ನು ತೆಗೆದುಕೊಂಡು ಬಂದು ಈಗಲೇ ಹೊರಡಬೇಕೆಂದು ಚಾಸಾ1 ರವರಿಗೆ ಹೇಳಿದ್ದರು ಎಂಬ ವಿಚಾರವನ್ನು ಹೇಳಿದ್ದರು ಎಂದರೆ ಸರಿ. ಆ ಸಮಯದಲ್ಲಿ ನನಗೂ ನಿನಗೂ ಯಾವುದೇ ಸಂಬಂಧ ಇಲ್ಲ, ಈ ಬಗ್ಗೆ ದೂರು ಕೊಟ್ಟರೆ ಅಥವಾ ಇಲ್ಲಿಗೆ ಬಂದರೆ ನಿನ್ನನ್ನು ಜೀವಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ ವಿಚಾರವನ್ನು ಹೇಳಿರುತ್ತಾರೆ ಎಂದರೆ ಸರಿ.

( ಈ ಹಂತದಲ್ಲಿ ವಕೀಲರಾದ ಶ್ರೀ.ಡಿ.ಕೆ.ಬಿ ರವರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)